# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು

## ಎಸ್.ಸಿ. ಸಂಖ್ಯೆ: 291/2023

ಫಿರ್ಯಾದುದಾರರುಃ ಸರ್ಕಾರದ ಪರ ಹೆಚ್.ಡಿ. ಕೋಟೆ ಪೊಲೀಸರು

ಃ ವಿರುದ್ಧ ಃ

ಆರೋಪಿತಃ ಪುಟ್ಟೇಗೌಡ

### ದೋಷಾರೋಪಣೆ

ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಶ್ರೀಮತಿ ಉಷಾರಾಣಿ, ಬಿ.ಎ. (ಲಾ) ಎಲ್.ಎಲ್.ಬಿ., ಆದ ನಾನು, ಈ ಕೆಳಕಂಡ ಆರೋಪಿತರಾದ,

ಪುಟ್ಟೇಗೌಡ ಬಿನ್ ಪುಟ್ಟಾಜೇಗೌಡ,<br>
40 ವರ್ಷ,<br>
ವಾಸಃ ಕ್ಯಾತನಹಳ್ಳಿ ಗ್ರಾಮ,<br>
ಹೆಚ್. ಡಿ. ಕೋಟೆ ತಾಲ್ಲೂಕು<br>
ಮೈಸೂರು ಜಿಲ್ಲೆ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ 24-09-2017 ರಂದು ರಾತ್ರಿ 8-30 ಗಂಟೆ ಸಮಯದಲ್ಲಿ, ಆರೋಪಿತರಾದ ನೀವು ಕ್ಯಾತನಹಳ್ಳಿ ಗ್ರಾಮದ ಬಸವರಾಜು ಎಂಬುವವರ ವಾಸದ ಮನೆಯ ಮುಂಭಾಗದ ಸಾರ್ವಜನಿಕ ರಸ್ತೆಯಲ್ಲಿ ಮೃತ ಮಹದೇವಸ್ವಾಮಿಯನ್ನು ಕುರಿತು ಬಸವರಾಜು ಎಲ್ಲಿ ಎಂದು ಕೇಳಿದ್ದು, ಅದಕ್ಕೆ ಮಹದೇವಸ್ವಾಮಿಯು ಗೊತ್ತಿಲ್ಲ, ಏಕೆ ಕೇಳುತ್ತೀಯಾ, ಅವರ ಮನೆಗೆ ಹೋಗಿ ಕೇಳು ಎಂದು ಹೇಳಿದ್ದಕ್ಕೆ, ತನಗೆ ಹಿಂದಕ್ಕೆ ತಿರುಗಿಸಿ ಮಾತನಾಡುತ್ತೀಯಾ ಎಂದು ನೀವು ಏಕಾಏಕಿ ಕೈಯಿಂದ ಮೃತ ಮಹದೇವಸ್ವಾಮಿಯ ಮೈಕೈಗೆ ಐದಾರು ಬಾರಿ ಹೊಡೆದು, ಭಾರತೀಯ ದಂಡ ಸಂಹಿತೆ ಕಲಂ 323 ರ ಅಡಿಯಲ್ಲಿ ದಂಡನಾರ್ಹ ಅಪರಾಧ ಎಸಗಿರುತ್ತೀರಿ ಮತ್ತು ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಕೊನೆಯದಾಗಿ, ಸದರಿ ದಿನಾಂಕ ಮತ್ತು ಸ್ಥಳದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ ಆರೋಪಿಯಾದ ನೀವು, ಮಹದೇವಸ್ವಾಮಿಗೆ ಮೇಲೆ ಹೇಳಿದ ರೀತಿ ಹೊಡೆದು ತಾನು ಹೇಳಿದಂತೆ ಕೇಳಬೇಕು, ಈ ಹಿಂದೆಯೂ ಸಹ ಐದಾರು ಬಾರಿ ಏಟು ಕೊಟ್ಟಿದ್ದೇನೆ ಆದರೂ ಸಹ ನಿನಗೆ ಬುದ್ಧಿ

ಬಂದಿಲ್ಲ ಎಂದು ಹೇಳಿದ್ದಕ್ಕೆ ಮಹದೇವಸ್ವಾಮಿಯು ನಿಮ್ಮನ್ನು ಕುರಿತು ಪದೇ ಪದೇ ಹೊಡೆಯುತ್ತಿದ್ದೀಯಾ, ಏಕೆ ನೀನು ಹೇಳಿದಂತೆ ಕೇಳಬೇಕು, ಹೊಡೆಯಲು ನೀನು ಯಾರು ಎಂದು ಕೇಳಿದ್ದಕ್ಕೆ ತಾವು ಹೌದು ನೀನು ಬದುಕಿರೊವರೆಗೂ ತಾನು ಹೇಳಿದಂತೆಯೇ ಕೇಳಬೇಕು, ಇಲ್ಲವಾದರೆ ಎಲ್ಲಿಯಾದರೂ ಹೋಗಿ ಸಾಯಿ, ಬದುಕಿರಬೇಡ ಎಂದು ದುಷ್ಪ್ರೇರಣೆ ಮಾಡಿದ ಕಾರಣದಿಂದ ಮನನೊಂದ ಮಹದೇವಸ್ವಾಮಿಯು ಆಯ್ತು ನನ್ನ ಸಾವಿಗೆ ತಾವೇ ಕಾರಣ ಎಂದು ನಿಮ್ಮ ಹೆಸರನ್ನು ಬರೆದಿಟ್ಟು ಸಾಯುತ್ತೇನೆಂದು ಹೇಳಿ ಹೊರಟು ದಿನಾಂಕಃ25.09.2017 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಅವರ ಮನೆಯಲ್ಲಿ ಕಾಳುಗಳು ಕೆಡದಂತೆ ಇಡಲು ಉಪಯೋಗಿಸುವ ಮಾತ್ರೆಗಳನ್ನು ಕುಡಿದು ಅದೇ ದಿನ ಮಧ್ಯಾಹ್ನ 2.30 ಗಂಟೆಯಲ್ಲಿ ಮೃತಪಟ್ಟಿದ್ದು, ನೀವು ಸದರಿ ಆತ್ಮಹತ್ಯೆಗೆ ದುಷ್ಪ್ರೇರಣೆ ನೀಡಿ, ಭಾರತೀಯ ದಂಡ ಸಂಹಿತೆ ಕಲಂ 306 ರ ಅಡಿಯಲ್ಲಿ ದಂಡನಾರ್ಹ ಅಪರಾಧ ಎಸಗಿರುತ್ತೀರಿ ಮತ್ತು ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಈ ಮೇಲ್ಕಂಡ ಆರೋಪಗಳಡಿ ನೀವು ನನ್ನಿಂದ ಅಧಿವಿಚಾರಣೆಗೊಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 02.04.2025

**(ಉಷಾರಾಣಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.